ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.**28/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ನಾರಾಯಣಗೌಡ ಬಿ.ಎಸ್ | ಸಿ.ಡಬ್ಲ್ಯೂ: 6 | ಪಿ.ಡಬ್ಲ್ಯೂ: 9 |
| ತಂದೆಯ ಹೆಸರು | ಸೋಮೇಗೌಡ | | |
| ವಯಸ್ಸು | 74 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಬಸ್ಕಿ ಗ್ರಾಮ, ಮೂಡಿಗೆರೆ ತಾಃ | | |

ದಿನಾಂಕಃ 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ **ಸ.ಸ.ಅ.** ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ **299** ರಡಿಯಲ್ಲಿ ಸಾಕ್ಷಿ ವಿಚಾರಣೆ )

1. 2 ಮತ್ತು 3 ನೇ ಆರೋಪಿಗಳು ನನಗೆ ಗೊತ್ತು. ಚಾಸಾ.5 ಸುರೇಶ್ ರವರ ಪರಿಚಯ ನನಗೆ ಇರುತ್ತದೆ. ಈಗ ನಾನು ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿ.ಪಿ.10 ಎಂದು ಗುರುತಿಸಲಾಗಿರುತ್ತದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಮಾಲು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು.

2. ನಿ.ಪಿ.10 ದಾಖಲೆಗೆ ಸಹಿಯನ್ನು 10 ವರ್ಷಗಳ ಹಿಂದೆ ಪೆಪ್ಪರ್ ಕಳ್ಳತನವಾದ ವಿಚಾರವಾಗಿ ಚಾಸಾ.1 ಶ್ರೀಕಂಠೇಗೌಡರ ಮನೆಯ ಬಳಿ ಮಾಡಿದ್ದೆ. ಸಹಿ ಮಾಡಿದ ಸಮಯ ತಿಳಿದಿಲ್ಲ. ಆ ಸಮಯದಲ್ಲಿ ಪೊಲೀಸರು ಮತ್ತು ಗ್ರಾಮದವರು ಹಾಜರಿದ್ದರು. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದು ಮಾತ್ರ ಗೊತ್ತು.

3. ನಿ.ಪಿ.15 ದಾಖಲೆಗೆ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮೆಣಸು ಕಳ್ಳತನ ವಿಚಾರವಾಗಿ ಮಾಡಿದ್ದೆ. ಪೊಲೀಸ್ ಠಾಣೆಯಲ್ಲಿ ನಿ.ಪಿ.15 ದಾಖಲೆಗೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಬೇರೆ ಯಾರು ಯಾರು

ಇದ್ದರು ಮತ್ತು ಎಷ್ಟು ಸಮಯ ಆಗಿತ್ತು ಎಂದು ಹೇಳಲು ಆಗುವುದಿಲ್ಲ. ಆ ಎರಡು ದಾಖಲೆಗಳಲ್ಲಿ ಬರೆದಿರುವ ವಿಚಾರವನ್ನು ಓದಿ ತಿಳಿದುಕೊಂಡಿದ್ದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

4. ದಿಃ 27.08.2015 ರಂದು ಸಂಜೆ 6.30 ರಿಂದ 7.00 ರವರೆಗೆ ಚಾಸಾ.1 ರವರ ಮನೆಯಲ್ಲಿ ನಾನು ನಿ.ಪಿ.10 ದಾಖಲೆಗೆ ಪೊಲೀಸರ ಸಮಕ್ಷಮದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಆ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ತಾವು ಕಳ್ಳತನ ಮಾಡಿದ ಸ್ಥಳ ಇದೆ ಎಂದು ತೋರಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.5 ಸುರೇಶ್ ರವರು ಸಹ ಸಹಿ ಮಾಡಿದ್ದರು ಎಂದರೆ ಸರಿ.

5. ದಿಃ 28.08.2015 ರಂದು ಮಧ್ಯಾಹ್ನ 1.00 ರಿಂದ 1.45 ರ ಸಮಯದಲ್ಲಿ ಮೂಡಿಗೆರೆಯ ಚಾಸಾ.4 ಖೇಮರಾಜ್ ರವರ ಅಂಗಡಿಯ ಬಳಿ ನಿ.ಪಿ.15 ದಾಖಲೆಗೆ ಮಾಡಿದ್ದೆ ಎಂದರೆ ಸರಿ. ಆ ಸಮಯದಲ್ಲಿ 1 ರಿಂದ 4 ನೇ ಆರೋಪಿಗಳು ತಾವು ಕಳವು ಮಾಡಿದ ಮೆಣಸನ್ನು ಚಾಸಾ.4 ರವರ ಅಂಗಡಿಗೆ ಮಾರಾಟ ಮಾಡಿದ್ದರು ಎಂದು ಹೇಳಿದ್ದರು ಎಂದರೆ ಸಾಕ್ಷಿ, 1 ರಿಂದ 4 ನೇ ಆರೋಪಿಗಳು ಸ್ಥಳದಲ್ಲಿ ಇರಲಿಲ್ಲ. ನಾನು ಸ್ಥಳದಲ್ಲಿ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪೊಲೀಸರು 50 ಕೆ.ಜಿ ಕಾಳು ಮೆಣಸನ್ನು ವಶಕ್ಕೆ ಪಡೆದು ಅದರಲ್ಲಿ ಪರೀಕ್ಷೆಗಾಗಿ 250 ಗ್ರಾಂ ಮೆಣಸನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ನನ್ನ ಸಮಕ್ಷಮ ವಶಕ್ಕೆ ಪಡೆದರು ಎಂದರೆ ಸರಿ. ಸ್ಥಳದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿ. ನನಗೆ ಈ ಕೇಸಿನ ಎಲ್ಲಾ ವಿಚಾರ ತಿಳಿದಿದ್ದರು ವಯಸ್ಸಾದ ಕಾರಣ ಕೆಲವೊಂದು ವಿಚಾರವನ್ನು ಮರೆತು ಸತ್ಯವನ್ನು ಮರೆಮಾಚುತ್ತಿದ್ದೇನೆ ಎಂರದೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರಿಗೆ ಸಹಾಯ ಮಾಡಲು ಕೆಲವೊಂದು ವಿಚಾರಗಳನ್ನು ಮರೆಮಾಚಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ